ಅಂಗವಿಕಲರ ಸಮರ್ಪಕ ರೀತಿಯಲ್ಲಿ ಮೀಸಲಾತಿ ಬಗ್ಗೆ.

1088-ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈಗ ಇರುವ ಮೀಸಲಾತಿಯಲ್ಲಿ ಸಮರ್ಪಕ ಸಹಾಯ ಅಂಗವಿಕಲರಿಗೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಮೀಸಲಾತಿ ಅನ್ವಯ ಅಂಗವಿಕಲರ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಇಲ್ಲ.

ವಸತಿ ಸಮಸ್ಯೆ ಬಗ್ಗೆ.

1089-ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಸತಿ ಸಮಸ್ಯೆಯ ಜನಸಂಖ್ಯೆ ಎಡೆಗೆ ಅನುಗುಣವಾಗಿ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಆ ಕಾರಣದಿಂದ ವಸತಿ ಸಂಖ್ಯೆಯನ್ನು ಜನಸಂಖ್ಯೆಗನುಗುಣವಾಗಿ ಒದಗಿಸುವ ಯೋಜನೆ ಸರ್ಕಾರಕ್ಕೆ ಇದ್ದೆಯೇ?*

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು)

ಅ) ಹೌದು.

ಆ) ಸಂಪನ್ಮೂಲ ಕ್ರೋಢೀಕರಣವನ್ನು ಅವಲಂಬಿಸಿ ವಸತಿ ಸಮಸ್ಯೆ ಬಗೆಹರಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಶ್ರೀ ಜಿ.ಎಸ್. ಆಚಾರ್ : ಈ ಕೆಳಕಂಡ ಅರ್ಜಿಗಳನ್ನು ಸದನಕ್ಕೆ ಒಪ್ಪಿರುತ್ತೇನೆ.

ಅ) ತಗ್ಗರ್ಸೆ ಗ್ರಾಮದ ಮೂಕನಗದ್ದೆ ಎಂಬಲ್ಲಿ ಕೊಚ್ಚಿಹೋಗಿರುವ ವೆಂಟೆಡ್ ಡ್ಯಾಮನ್ನು ಭದ್ರವಾಗಿ ಕಟ್ಟಿ ಕೊಡುವ ಬಗ್ಗೆ.

ಆ) ಕುಂದಾಪುರ ತಾಲ್ಲೂಕು ಬಿಜೂರು ಗ್ರಾಮದ ಮೂರನೆಯ ವಾರ್ಡನ ಪೂರ್ವ ಭಾಗಕ್ಕೆ ಇರುವ ನದಿಗೆ ಸೇತುವೆ ಕಟ್ಟುವುದು.

ಇ) ಕುಂದಾಪುರ ತಾಲ್ಲೂಕಿನ ಶಿರೂರಿನಲ್ಲಿ ಚಿಕ್ಕಬಂದರು ನಿರ್ಮಾಣ ಹಾಗೂ ಮಂಜುಗಡ್ಡೆ ಕಾರ್ಖಾನೆ ಪುನರಾರಂಭಿಸುವುದು.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷಣೆಯವರೆ, ಮಾನ್ಯ ಮಲ್ಲಾರಿಗೌಡ ಪಾಟೀಲ್‌ರವರ ಹೆಸರಿನಲ್ಲಿರುವ ಅರ್ಜಿಯನ್ನು ತಮ್ಮ ಅಪ್ಪಣೆ ಪಡೆದು ಸಭೆಯ ಮುಂದೆ ಮಂಡಿಸುತ್ತೇನೆ.